# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ

ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)ಪಿ.ಆರ್/ 61 /2021-22. ದಿನಾಂಕ :21-05-21.

ದಿನಾಂಕ: 22-05-2021 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143ರ ವಾರ್ಡ್ ಕಛೇರಿಯಲ್ಲಿ WDC ಸಭೆಯನ್ನು ಏರ್ಪಡಿಸಲಾಗಿ, "Ward Deter committee" (WDC) ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಕ್ರ. ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ವೆಂಕಟೇಶ್ ಆರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು 143 | 9480684415 |
| 3 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 4 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 5 | ಎಂ.ಎಂ.ಬಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 6 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

ದಿನಾಂಕ:-22-05-2021 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

"Ward Deter committee" (WDC) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಉಮಾಶಂಕರ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಪೊಬ್ಬತ್ತಿ ಹೆರಿಗೆ ಆಸ್ಪತ್ರೆಯಲ್ಲಿ "Triage" ಸೆಂಟರ್ ಅನ್ನು ಸ್ಥಾಪಿಸಿರುವ ಬಗ್ಗೆ ಸಭೆಗೆ ತಿಳಿಸಿದರು. ಈ ಸೆಂಟರ್‌ನಲ್ಲಿ ಒಟ್ಟು 14 ಹಾಸಿಗೆಗಳನ್ನು ಒದಗಿಸಲಾಗಿದ್ದು, ಇದಕ್ಕೆ ಡಾ॥.ಮಂಜುನಾಥ್ ರವರು ನೋಡಲ್ ಅಧಿಕಾರಿಯಾಗಿದ್ದು ಅವರ ದೂರವಾಣಿ

Scanned by CamScanner

ಸಂಖ್ಯೆ (ಮೊಬೈಲ್ ಸಂಖ್ಯೆ: 9900469886) ಆಗಿರುತ್ತದೆಂದು ತಿಳಿಸಿದರು. ಮತ್ತು "Triage" ಸೆಂಟರ್ ನಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ವಾರ್ಡಿನ ವೈದ್ಯಾಧಿಕಾರಿಗಳು ನೀಡುವರೆಂದು ಸಭೆಗೆ ತಿಳಿಸಿದರು.

ನಂತರ ಪುನಃ ನೋಡಲ್ ಅಧಿಕಾರಿಗಳು ಹಾಗೂ WDC ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ವಾರ್ ರೂಂ ಸ್ಥಾಪಿಸಲು ಉದ್ದೇಶಿಸಲಾಗಿದ್ದು ಇದನ್ನು ವಾರ್ಡ್ ಕಛೇರಿಯ ಮೊದಲನೇ ಮಹಡಿಯಲ್ಲಿರುವ ಕೊಠಡಿಯಲ್ಲಿ ತೆರೆಯಲು ಕ್ರಮವಹಿಸಲಾಗುತ್ತದೆಂದು ತಿಳಿಸಿದರು ವಾರ್ ರೂಂನಲ್ಲಿ ಹೆಲ್ಪ್‌ಲೈನ್ ನಂ ಅನ್ನು ಸದ್ಯದಲ್ಲಿಯೇ ಸ್ಥಾಪಿಸಲಾಗುವುದೆಂದು ತಿಳಿಸಿದರು.

ನಂತರ ಪುನಃ WDC ಅಧ್ಯಕ್ಷರು ಮಾತನಾಡಿ WDC ಕಮಿಟಿಯಲ್ಲಿ "ವಾಲೆಂಟಿಯರ್ಸ್"ಗಳನ್ನು ನೇಮಿಸಿಕೊಳ್ಳಲು ಮೇಲಾಧಿಕಾರಿಗಳು ಆದೇಶಿಸಿರುವಂತೆ ಇದೇ ವಾರ್ಡ್ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಈ ಕೆಳಕಂಡವರನ್ನು ಅವರ ಅಭಿಪ್ರಾಯ ಪಡೆದು " ವಾಲೆಂಟಿಯರ್" ಗಳನ್ನಾಗಿ ನೇಮಿಸಿಕೊಳ್ಳಲಾಗಿರುತ್ತದೆ. ಅವರುಗಳೆಂದರೆ:-

1. ಶ್ರೀಮತಿ. ಅನುಷಾ – ಮೊಬೈಲ್ ನಂ. 991640746
2. ಶ್ರೀ. ವಿನೋದ್‌ಕುಮಾರ್ – ಮೊಬೈಲ್ ನಂ. 9019228173
3. ಶ್ರೀ. ಯೂಸುಫ್ – ಮೊಬೈಲ್ ನಂ. 9036670759

ನಂತರ ಪುನಃ WDC ಅಧ್ಯಕ್ಷರು ಮಾತನಾಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳು ಹಾಗೂ ವಾಲೆಂಟಿಯರ್ಸ್‌ಗಳ ಸಹಯೋಗದೊಂದಿಗೆ ಕೋವಿಡ್-19 ವಿಚಾರವಾಗಿ ಸರ್ಕಾರದಿಂದ ಜಾರಿಯಾಗುವ ಆದೇಶಗಳು, "Triage" ಸೆಂಟರ್ ಗಳಲ್ಲಿ, ವ್ಯಾಕ್ಸಿನ್ ಸೆಂಟರ್‌ಗಳಲ್ಲಿ ಮತ್ತು ಕೋವಿಡ್ ಟೆಸ್ಟ್ ಸೆಂಟರ್‌ಗಳಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳಿಗೆ ನಿಗಾ ವಹಿಸುವುದರ ಜೊತೆಗೆ ಸುಗಮವಾಗಿ ಚಟುವಟಿಕೆಗಳು ನಡೆಯುವಂತೆ ಸಹಕರಿಸಬೇಕೆಂದು ಕೋರಿದರು.

ನಂತರ ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್‌ನ ಸದಸ್ಯರಾದ ಶ್ರೀ. ಎಸ್. ವೆಂಕಟೇಶ್ ಹಾಗೂ ಶ್ರೀ. ಓ.ಪಿ. ಜಯಕುಮಾರ್ ರವರುಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುವ ಕೋವಿಡ್ -19 ಚಟುವಟಿಕೆಗಳಿಗೆ ತಮ್ಮ ಸಲಹೆ ಮತ್ತು ಸಹಕಾರಗಳನ್ನು ಖಂಡಿತ ನೀಡುವುದಾಗಿ ಸಭೆಗೆ ಭರವಸೆ ನೀಡಿದರು.

ನಂತರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರ ವಂದನಾರ್ಪಣೆಯೊಂದಿಗೆ WDC ಸಭೆಯನ್ನು ಮುಕ್ತಾಯಗೊಳಿಸಲಾಯಿತು.

31/5/2021.
ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -143 ವಿ. ವಿ.ಪುರಂ

31/05/2021
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)

Scanned by CamScanner